Regd No BG 155

26-9-1969

53 rd Year of Publication

SATYAVADI

Daily

MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಹಾರ ವಲಯಗಳು ರದ್ದಾಗಲಿ

8 ವರ್ಷಗಳಿಂದ ಜ್ಞಾನ ತಪ್ಪಿದೆ

★

ಅಂಕಾರ— ವಿದ್ಯುಚ್ಛಕ್ತಿ ತಗುಲಿ 8 ವರ್ಷಗಳಿಂದ ಜ್ಞಾನ ತಪ್ಪಿ ಆಸ್ಪತ್ರೆಯಲ್ಲಿದ್ದ ಟರ್ಕಿ ಡಾಕ್ಟರು ಮೊನ್ನೆ ನಿಧನರಾದರು.

"ಸತ್ಯವಾದಿ" ಯ ಸ್ವರ್ಣೋತ್ಸವ

28-9-1969 ಭಾನುವಾರ
ಬೆಳಿಗ್ಗೆ 10 ಗಂಟೆಗೆ
ಮೈಸೂರು 4, ಚಾಮರಾಜಪುರಂನಲ್ಲಿನ
'ಸತ್ಯವಾದಿ' ಆಫೀಸಿನಲ್ಲಿ

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯೆ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕ ವಂದಿಸುತ್ತೇವೆ.

★

ಪ್ರಕಟಣೆ

ನಂ. ಪಿ 77

ವಿಷಯ : 1-6-1969 ರಿಂದ 30-9-1969 ರ ಕಡೆಯವರೆಗೆ ನಾಲ್ಕು-ತಿಂಗಳುವರೆಗೆ ಸಂಗ್ರಹವಾಗಿರುವ ಬಾಯಿಲರ್ ಸಿಂಡರುಗಳು ಮತ್ತು ಬೂದಿಯ ಸಂಪ್ಲಿಸ್ತ ಹರಾಜು ಮಾರಾಟ ಪ್ರಕಟಣೆ. 6-10-1969 ರ ಬೆಳಿಗ್ಗೆ 10 ಗಂಟೆಗೆ.

——

ಸಾರ್ವಜನಿಕರ ತಿಳುವಳಿಕೆಗೆ ಪ್ರಕಟಿಸುವುದೇನೆಂದರೆ, ಮೇಲ್ಕಂಡ ಹರಾಜು 6-10-1969 ರ ಬೆಳಿಗ್ಗೆ 10 ಗಂಟೆಗೆ ಮೈಸೂರಿನಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಯ ಜನರಲ್ ಮ್ಯಾನೇಜರ್‌ರವರ ಚೇಂಬರ್ಸ್‌ನಲ್ಲಿ ನಡೆಯುವುದು ಸಕಾಲದಲ್ಲಿ ನಗದಾಗಿ ರೂ. 500 ಮಾತ್ರ ಆರ್ನೆಸ್ಟ್ ಹಣವನ್ನು ಬಿಡ್ದಾರರು ಠೇವಣಿ ಮಾಡಬೇಕು ಮತ್ತು ಹರಾಜು ಮಾರಾಟ ಕಾಲದಲ್ಲಿ ರಶೀತಿಯನ್ನು ಹಾಜರ್ಪಡಿಸಬೇಕು. ಹೆಚ್ಚು ವಿವರಗಳಿಗೆ 25-9-1969 ರ ಮೈಸೂರು ಗೆಜಿಟ್ ಭಾಗ VI ನ್ನು ದಯವಿಟ್ಟು ನೋಡಿ. ಕೆಲಸದ ವೇಳೆಗಳಲ್ಲಿ ಈ ಕಛೇರಿಯಿಂದ ವಿವರಯುತವಾದ ಹರಾಜು ಮಾರಾಟ ಪ್ರಕಟಣೆಯನ್ನು ಪಡೆಯಬಹುದು. ಯಾವುದೇ ರಕ್ಷಣಾ ಷರತ್ತನ್ನು ಆಥವಾ ಷರತ್ತುಗಳನ್ನು ಸರಕಾರಿ ಕೆಲಸದ ಹಿತಕ್ಕಾಗಿ ವಿಧಿಸಲಾಗುವುದು, ಮತ್ತು ಅಂಥಾ ಷರತ್ತುಗಳು ಬದ್ಧಪಡಿಸುವದಾಗಿದೆ.

ಸಹಿ/ ಜಿ. ತಿಪ್ಪೇಸ್ವಾಮಿ
ಜನರಲ್ ಮ್ಯಾನೇಜರ್
ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ
ಮೈಸೂರು - 4.

.... ಪ್ರಮುಖ ವಾರ್ತೆಗಳು ....

——

ಗಾಂಧೀಜೀ ಪ್ರದರ್ಶನಕ್ಕಾಗಿ ವ್ಯವಸ್ಥೆ ಮಾಲಾಗಿರುವ ವಿಶೇಷ ಟ್ರೇನಿನ ಉದ್ಘಾಟನೆಯನ್ನು ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರು ಅಮೃತಸರದಲ್ಲಿ ಅಕ್ಟೋಬರು 1 ರಂದು ಉದ್ಘಾಟಿಸುವರು.

★

ಅಹಮದಾಬಾದು— ಪ್ರಧಾನಿ ಇಂದಿರಾರವರು ಇಲ್ಲಿಗೆ ಆನಿರೀಕ್ಷ ಭೇಟಿ ಕೊಟ್ಟು ಗಲಭೆಗೆ ತುತ್ತಾದ ಸ್ಥಳಗಳನ್ನು ಪರಿಶೀಲಿಸಿದರು – ಉಪವಾಸ ಮಾಡುತ್ತಿರುವ ಶ್ರೀ ಮೊರಾರ್ಜಿ ದೇಸಾಯರನ್ನೂ ಕಂಡಿದ್ದರು.

●

ಅಹಮದಾಬಾದು— ಅಮ್ಲಿ ಅಸ್ಸಾನಲ್ಲಿ ಜನತಾ ಎಕ್ಸ್‌ಪ್ರೆಸ್ ಮೇಲೆ ಗಲಭೆಗಾರರು ನಡೆಸಿದ ಧಾಳಿಯಲ್ಲಿ 11 ಮಂದಿ ಸತ್ತರು.

★

ವಾಷಿಂಗ್ಟ್ಟ— ಅಂತರಾಷ್ಟ್ರೀಯ ಅಭಿವೃದ್ಧಿ ಸಂಘವು ಭಾರತದ ರೈಲ್ವೇ ಕಾರ್ಯಕ್ರಮಕ್ಕೆ ರೂ 41.25 ಸಾಲಾ ನೀಡಲಿದೆ.

★

ಕಾಶ್ಮೀರ— ಆಕ್ರಮಸಾಗಾಣಿಕೆ ರಾಜನೆಂದು ಸಂಬೋಧಿಸಲಾಗಿರುವ ಒಬ್ಬ ಕೋಟ್ಯಾಧೀಶ್ವರನು ಬಂಧಿಸಲ್ಪಟ್ಟನು.

○

ಕಾರವಾರ— 105 ವರ್ಷದ ಪೌರ ಸಭಾ ಚುನಾವಣೆ ನಾಳೆ ನಡೆಯಲಿದೆ – 19 ಸ್ಥಾನಗಳಿಗೆ 52 ಮಂದಿ ಸ್ಪರ್ಧಿಸಿರುವರು

○

ಗಾಂಧಿ ಶತಮಾನೋತ್ಸವ

ಮೈಸೂರು— ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಟೌನ್ ಹಾಲ್‌ನಲ್ಲಿ ಬುಧವಾರ, ಗುರುವಾರ ಸಂಜೆ ಮಹಾತ್ಮಾ ಗಾಂಧೀಜೀ ಶತಮಾನೋತ್ಸವ ಸಮಾರಂಭವು ನೆರವೇರಿತು.

ಆಹಾರ ವಲಯಗಳು

ನವದೆಹಲಿ— ಆಹಾರ ವಲಯಗಳನ್ನು ರದ್ದುಗೊಳಿಸಿ, ದೇಶಾದ್ಯಂತ ಆಹಾರ ಧಾನ್ಯಗಳ ಓಡಾಟದ ನಿರ್ಬಂಧ ತೆಗೆದುಹಾಕಬೇಕೆಂದು ಆಹಾರಧಾನ್ಯ ವ್ಯಾಪಾರಿಗಳ ಸಂ

ಸಿ ಪಿ ಆರ್

ನಾಗಪುರ— ಸಿ ಪಿ ಆರ್ ಮೇಲಿನ ತನ್ನ ಏಕಸ್ವಾಮಿತ್ವವನ್ನು ಸರಕಾರ ತ್ಯಜಿಸಿ ಅದನ್ನು ಕಾರ್ಪೊರೇಷನ್ ಅಥವಾ ಟ್ರಸ್ಟು ಮಾಡಬೇಕೆಂದು ಸತ್ಯವಾದ ಪತ್ರಿಕೆ ಸಂಪಾದಕರು ಹೇಳಿದರು.

ಮುಷ್ಕರ

ಮದರಾಸು— ತಮ್ಮ ಕೇಳಿಕೆ ನೆರವೇರಲು ಸೆಂಟ್ರಲ್ ಪಾಲಿಟೆಕ್ನಿಕ್‌ನ 1000 ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು.

ಮಗಳನ್ನು ಮಾರಿದ

ಕೊಲಂಬೊ— ತಾನು ಸಾಕಲು ಸಾಧ್ಯವಾಗದಿದ್ದರಿಂದ ದಕ್ಷಿಣ ಸಿಲೋನಿನ ಹಾಕ್ಕಾಣದಲ್ಲಿಯ ಒಬ್ಬನು ತನ್ನ ವರ್ಷದ ಮಗಳನ್ನು ರೂ 80 ಕ್ಕೆ ಮಾರಿದನು – ಬೀದಿಯಲ್ಲಿ ಈ ಮಾರುವಿಕೆ ಬಗ್ಗೆ ಕೂಗಿಕೊಂಡು ಹೋಗುತ್ತಿದ್ದಾಗ ಒಬ್ಬನು ಕೊಂಡುಕೊಳ್ಳಲು ಒಪ್ಪಿ, ಪೋಲೀಸು ಸ್ಟೇಷನ್ನಿನಲ್ಲಿ ಒರೆಸಿ ಹಣ ಕೊಟ್ಟನು : ಹುಡುಗಿ ಹೊಸ ಯಜಮಾನನ ಜೊತೆಯಲ್ಲಿ ಹೋಯಿತು.

★ ಬೆಂಗಳೂರು— ಒಂದು ಕೈಗಾರಿಕಾ ಸಂಸ್ಥೆಯವರು ಎಲೆಕ್ಟ್ರಾನಿಕ್ ಗಡಿಯಾರ ತಯ್ಯಾರಿಸಲಿರುವರು.

★ಪಾಟ್ನಾ— ಗಲಭೆಯಲ್ಲಿ ನೊಂದ ಗುಜರಾತಿನ, ಪ್ರವಾಹಪೀಡಿತ ಬೀಹಾರು, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದ 28 ದಿಕ್ಕಿಲ್ಲದ ಮಕ್ಕಳನ್ನು ಈ ವರ್ಷ ಆನಂದ ಮಾರ್ಗದವರು ದತ್ತು ಮಾಡಿಕೊಳ್ಳಲಿರುವರು.

ಕೇರಳ ಮಂತ್ರಿಮಂಡಲ ವಿರುದ್ಧ

ಕಲ್ಲೀಕೋಟೆ— ಕೇರಳದಲ್ಲಿ ಸಂಯುಕ್ತ ಮಂತ್ರಿಮಂಡಲದ ರಾ ಜೀ ನಾ ಮೈ ಕೇಳಿಕೆ ಹಾಕಲು ಕಾಂಗ್ರೆಸ್ ಚಳವಳ ಹೂಡಲಿದೆ ಎಂದು ಹೇಳಲಾಗಿದೆ.

Quality Printing — Neat Binding

Lakshminarasimha Press

Sivarampet, Mysore

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

— ಆತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ನಾ ಜ ನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್ ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೇರಾ— ಈ ದಿವಸ

.... ಚಿತ್ತಾಕರ್ಷಕ ಚಿತ್ರ ....

ಮಾಧವಿ

ದಿನ 3 ಆಟಗಳು

Golden Jubilee of 'Satyavadi'

Sunday 28-9-1969

at 'Satyavadi' office Chamarajapuram, Mysore 1.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi. Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore

ವಿಶ್ವದಲ್ಲಿನ ಯುದ್ಧಗಳು

30 ವರ್ಷಗಳ ಹಿಂದೆ, 1939 ನೇ ಸೆಪ್ಟಂಬರು 1 ರಂದು ಯೂರೋಪಿನಲ್ಲಿ ದೀಪ ಆರಿತು. ಆಗ ವಿಶ್ವದಲ್ಲಿ ಬ್ಲಾಕ್ ಔಟ್ 6 ವರ್ಷ ಕಾಲ ಇರುವುದೆಂದು ಊಹಿಸಿರಲಿಲ್ಲ. ಯುದ್ಧವು ಮುಗಿದಾಗ, 30 ಮಿಲಿಯ ನಾಗರೀಕರೂ ಸೇರಿ 55 ಮಿಲಿಯಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದರು : ಮಿಲಿಯಗಟ್ಟಲೆ ಜನರು ಹೊರದೂಡಲ್ಪಟ್ಟಿದ್ದರು, ಅಥವಾ ದೇಶಭ್ರಷ್ಟರಾಗಿ ಮಾಡಲ್ಪಟ್ಟಿದ್ದರು. ಯೂರೋಪು ಮತ್ತು ದೂರ ಪೂರ್ವವು ಗೋಳಿನ ಗೋರಿಗಳ ಸಾಲಾದವು. ಎರಡನೇ ಯುದ್ಧವು 24 ವರ್ಷಗಳ ಹಿಂದೆ ಮುಗಿಯಿತು : ಅದರ ಧಕ್ಕೆ ಇನ್ನೂ ಇದೆ. ಈಗಲೂ ಏನಾದರೂ ತಪ್ಪು ನಿರ್ಧಾರದಿಂದ, ಗುಂಡಿ ಒತ್ತಿದರೆ, 2 ನೇ ವಿಶ್ವ ಯುದ್ಧದ ದಿಗಿಲು, ಹಾವಳಿಯನ್ನು ಕಡೆಗಾಣಿಸುವಷ್ಟು ಅನಾಹುತವಾಗುವುದು, ಎಂದು ಒಂದು ಜರ್ಮನ್ ಪತ್ರಿಕೆ ಪ್ರಕಟಿಸಿದೆ.

**

ಮಾನವ ಶರೀರದ ಬೆಲೆ

ನವದೆಹಲಿ— ರಸಾಯನಿಕ ಪದಾರ್ಥಗಳ ಲೆಕ್ಕದಲ್ಲಿ ಮಾನವ ಶರೀರ ಕೇವಲ 3 50 ಡಾಲರು (ಸುಮಾರು ರೂ 27) ಆಗುವದೆಂದು ಮೆಡಿಕಲ್ ಸ್ಕೂಲಿನ ನಾರ್ತ್ ವೆಸ್ಟ್ ವಿಶ್ವವಿದ್ಯಾನಿಲಯದ ಡಾ ॥ ಡೊನಾಲ್ಡ್ ಫೋರ್ಕ್ ಹೇಳಿರುವರು – ವಯಸ್ಕರ ದೇಹದಲ್ಲಿ ಶೇಕಡ 67 ಆಮ್ಲಜನಕ, 18 ಇಂಗಾಲ, 10 ಜಲಜನಕ 3 ಸಸಾರಜನಕ, 1.5 ಕ್ಯಾಲಿಷಿಯಂ, 1 ಫಾಸ್ಪರಸ್, 1.5 ರಷ್ಟು ಚಿನ್ನ ಬೆಳ್ಳಿ, ಮತ್ತಿತರ ವಸ್ತುಗಳು.

ಮನುಷ್ಯನಿಂದ ಒಳ್ಳೆಯದಾದರೂ ಕೆಟ್ಟದಾದರೂ ಉಂಟಾಗಿರೆ ಅದಕ್ಕೆ ಅವನಿಗಿರುವ ಸಂಗವೇ ಕಾರಣವಾಗುತ್ತದೆ.

Help The Gorakshana



ಗೋರಕ್ಷಣೆ ಮತ್ತು ಸ್ತ್ರೀಜನೆದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣಾಳ್ಕೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic